**ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ,**

**ತಿ. ನರಸೀಪುರ**

**ಸಿ ಸಿ ಸಂಖ್ಯೆ: 1948/2022**

**ಆಪಾದನೆ**

ಶ್ರೀ ಹನುಮಂತ ಜಿ.ಹೆಚ್. ಬಿ.ಎ.ಎಲ್., ಎಲ್‌ಎಲ್.ಎಮ್., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ತಿ. ನರಸೀಪುರ ಆದ ನಾನು

ಶಿವಕುಮಾರ್ ಎಸ್ ಬಿನ್ ಶಿವಮಲ್ಲಯ್ಯ<br>41 ವರ್ಷ, ವಾಸಃಕಾಳಿಹುಂಡಿ ಗ್ರಾಮ,<br>ತಿ ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.

ಎಂಬ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ಆಪಾದನೆ ಎನೆಂದರೆ–

ದಿನಾಂಕ : 24.05.2022 ರಂದು ಬೆಳಗ್ಗೆ 9.00 ಗಂಟೆ ಸಮಯದಲ್ಲಿ ತಿ.ನರಸೀಪುರ ಪೊಲೀಸ್ ಠಾಣೆ ವ್ಯಾಪ್ತಿಯ, ತಿ ನರಸೀಪುರ ತಾಲ್ಲೂಕಿನ ಬೆನಕನಹಳ್ಳಿ ಗ್ರಾಮದ ನಿಂಗಪ್ಪ ರವರ ಜಮೀನಿನ ಬಳಿ, ಆರೋಪಿಯಾದ ನೀವು ಕೆ.ಎಸ್.ಆರ್.ಟಿ.ಸಿ. ಬಸ್ ಸಂಖ್ಯೆ ಕೆಎ–10–ಎಫ್–0135 ನ್ನು ಅತೀ ವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿ, ಅದನ್ನು ಎಡಕ್ಕೆ ತಿರುಗಿಸುವಾಗ ಜಮೀನಿನ ತೆವರಿಗೆ ಗುದ್ದಿದ್ದು, ಆ ಪರಿಣಾಮ ಬಸ್‌ನಲ್ಲಿದ್ದ ಚಾಸಾ–3/ಸಂಜನಾ ರವರ ಬಲಗಾಲಿನ ಪಾದಕ್ಕೆ, ಚಾಸಾ–4/ಪೂಜಾ ರವರ ಬೆನ್ನಿನ ಭಾಗಕ್ಕೆ, ಚಾಸಾ–5/ರವರ ರಕ್ಷಿತಾ ರವರ ಎಡಕಿವಿಗೆ, ಚಾಸಾ–6/ಅನುಷಾ ರವರ ತಲೆಯ ಬಲ ಭಾಗಕ್ಕೆ, ಚಾಸಾ–7/ತೇಜಸ್ವನಿ ರವರ ಎಡ ಮತ್ತು ಬಲಭಾಗದ ತೊಡೆಗೆ ಸಾಮಾನ್ಯ ಸ್ವರೂಪದ ಗಾಯಪಡಿಸಿ, ಅಪಘಾತವಾದ ನಂತರ ಗಾಯಾಳುಗಳಿಗೆ ಚಿಕಿತ್ಸೆ ಕೊಡಿಸದೆ ಮತ್ತು ಅಪಘಾತದ ಕುರಿತು ಪೊಲೀಸ್ ಠಾಣೆಗೆ ಮಾಹಿತಿ ನೀಡದೆ, ಸ್ಥಳದಿಂದ ಹೋಗುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.279, 337 ಮತ್ತು ಮೋಟಾರು

ವಾಹನ ಕಾಯ್ದೆ ಕಲಂ 187 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆಃ ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರಃ ಹೌದು.

ಪ್ರಶ್ನೆಃ ನೀವು ಸದರಿ ಆಪಾದನೆಯನ್ನು ಒಪ್ಪಿಕೊಳ್ಳುತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರಃ ವಿಚಾರಣೆಯಾಗಬೇಕು.

(ಮೇಲಿನ ಆಪಾದನೆಯನ್ನು ಆಪಾದಿತರಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ದಿನಾಂಕಃ 29.02.2024.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ತಿ.ನರಸೀಪುರ.

(**ಸೂಚನೆ** :- ಆರೋಪಿತನಿಗೆ ತಮಿಳು ಭಾಷೆ ಮಾತ್ರ ಗೊತ್ತಿದ್ದು, ಕನ್ನಡ ಭಾಷೆ ಗೊತ್ತಿಲ್ಲದ ಕಾರಣ ನಮ್ಮ ನ್ಯಾಯಾಲಯದ ಸಿಬ್ಬಂದಿಯಾದ ಶ್ರೀ ರಾಜಶೇಖರ್‌ರವರಿಗೆ ತಮಿಳು ಭಾಷೆ ಗೊತ್ತಿದ್ದು, ಅವರನ್ನು ನ್ಯಾಯಾಲಯಕ್ಕೆ ಮತ್ತು ಆರೋಪಿಗೆ ಸಹಾಯ ಮಾಡಲು ನೇಮಿಸಲಾಯಿತು).